ಕಾಚೆರಕನ ಹಳ್ಳಿ ಯಾಂತ್ರಿಕ ಕಸಾಯಿಖಾನೆ ಬಗ್ಗೆ

೪೩. ಶ್ರೀ ಎಲ್. ಆರ್. ಶಿವರಾಮೇಗೌಡ, (ನಾಗಮಂಗಲ).— ಮಾನ್ಯ ಅರಣ್ಯ ಮತ್ತು ಪಶುಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಪ್ರಾಣಿ ಆಹಾರ ನಿಗಮವು ನಗರದ ಹೊರವಲಯದ ಕಾಚರಕನ ಹಳ್ಳಿ ಸಮೀಪ ಯಾಂತ್ರಿಕ ಕಸಾಯಿಖಾನೆ ನಿರ್ಮಿಸುವ ಪ್ರಸ್ತಾವನೆಯನ್ನು ಹೊಂದಿದೆಯೇ ?

ಆ) ಮೇಲ್ಕಂಡ ಕಸಾಯಿಖಾನೆ ನಿರ್ಮಾಣ ವಿಚಾರದಲ್ಲಿ ಸಾರ್ವಜನಿಕರಿಂದ ಪ್ರತಿಭಟನೆಯಾಗುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಕಸಾಯಿಖಾನೆ ನಿರ್ಮಾಣದ ಬಗ್ಗೆ ಸರ್ಕಾರವು ಕೈಗೊಳ್ಳಲಿರುವ ಸ್ಪಷ್ಟ ಕ್ರಮಗಳೇನು ?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನೆ ಮಂತ್ರಿಗಳು). —

ಅ) ಹೌದು.

ಆ) ಹೌದು.

ಇ) ಆಧುನಿಕ ಕಸಾಯಿಖಾನೆಯನ್ನು ನಗರದ ಹೊರವಲಯದಲ್ಲಿ ಬೇರೆ ಜಾಗದಲ್ಲಿ ನಿರ್ಮಿಸುವ ಸಲುವಾಗಿ ಜಾಗದ ಲಭ್ಯವನ್ನು ಪರಿಶೀಲಿಸಲಾಗುತ್ತಿದೆ.

ಸರಕಾರಿ ಆಸ್ಪತ್ರೆಯ ಮಂಜೂರಾತಿ ಬಗ್ಗೆ

೩೭. ಶ್ರೀ ಮಾಲೀಕಯ್ಯ ವಿ ಗಂತ್ಯೇದಾರ್ (ಅಫಜಲ್‌ಪುರ) —ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಫಜಲ್‌ಪುರ ತಾಲ್ಲೂಕು ಕೇಂದ್ರಕ್ಕೆ ಸರ್ಕಾರ ಮೂಲತ್ ಹಾಸಿಗೆಗಳ ಆಸ್ಪತ್ರೆಯನ್ನು ಮಂಜೂರು ಮಾಡಿ ಎಷ್ಟು ವರ್ಷಗಳಾಯಿತು ?

ಆ) ಈ ಕೆಲಸ ಕಾರ್ಯಗತವಾಗದಿರಲು ಕಾರಣವೇನು? ಹಾಗೂ ಈವರೆವಿಗೂ ಮಾಡಲಾದ ಖರ್ಚು ಎಷ್ಟು ?

ಇ) ೧೯೯೦-೯೧ನೇ ಆಯವ್ಯಯದಲ್ಲಿ ಇದಕ್ಕೆ ಒದಗಿಸಲಾದ ಹಣವೆಷ್ಟು ?

ಶ್ರೀಮತಿ ಪುನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಸುಮಾರು ೯ ವರ್ಷಗಳ ಹಿಂದೆ ಅಫಜಲ್‌ಪುರಕ್ಕೆ ೩೦ ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯನ್ನು ಮಂಜೂರು ಮಾಡಲಾಗಿದೆ.

ಆ) ಆಯವ್ಯಯದಲ್ಲಿ ಹಣದ ಅಭಾವದಿಂದ ಈ ಕೆಲಸ ಇನ್ನೂ ಕಾರ್ಯಗತವಾಗಿರುವುದಿಲ್ಲ. ಈವರೆವಿಗೂ ರೂ. ೯.೪೯ ಲಕ್ಷ ಖರ್ಚು ಮಾಡಲಾಗಿದೆ.

ಇ) ೧೯೯೧-೯೨ನೇ ಸಾಲಿಗೆ ಗುಲ್ಬರ್ಗಾ ಜಿಲ್ಲಾಪರಿಷತ್ತಿಗೆ ಸಮುದಾಯ ಆರೋಗ್ಯ ಕೇಂದ್ರಗಳ ಕಟ್ಟಡಗಳಿಗೆ ಒಟ್ಟು ರೂ. ೨೦.೦೦ ಲಕ್ಷ ಒದಗಿಸಲಾಗಿದೆ.

ಬಳ್ಳಾರಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯ ಅವ್ಯವಸ್ಥೆಯ ಬಗ್ಗೆ

೪೫. ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯ ಅವ್ಯವಸ್ಥೆಯು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಮೇಲ್ಕಂಡ ಆಸ್ಪತ್ರೆಯಲ್ಲಿ ನೀರಿನ ಅಭಾವ ಬಹಳವಾಗಿದ್ದು ರೋಗಿಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಅವ್ಯವಸ್ಥೆ ಹಾಗೂ ನೀರಿನ ಅಭಾವದ ನಿವಾರಣೆಗಾಗಿ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಹೌದು, ಸ್ವಲ್ಪ ಮಟ್ಟಿಗೆ ನ್ಯೂನತೆಗಳಿವೆ.

ಆ) ಬಂದಿದೆ.

ಇ) ನೀರಿನ ಅಭಾವದ ಬಗ್ಗೆ ಸಂಬಂಧಪಟ್ಟ ಇಲಾಖೆಯೊಡನೆ ವ್ಯವಹರಿಸಿ, ನೀರಿನ ಅಭಾವದ ನಿವಾರಣೆಗಾಗಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಬೆಂಗಳೂರಿನಲ್ಲಿ ರಸ್ತೆ ಬದಿ ಗಿಡನೆಡುವ ಕಾರ್ಯಕ್ರಮದ ಬಗ್ಗೆ

೪೭. ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ).—ಮಾನ್ಯ ಅರಣ್ಯ ಮತ್ತು ಪಶುಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದ ರಸ್ತೆ ಬದಿಗಳಲ್ಲಿ ಗಿಡಗಳನ್ನು ನೆಡುವ ಕಾರ್ಯಕ್ರಮವನ್ನು ಅರಣ್ಯ ಇಲಾಖೆಯವರು ಕೈಗೊಂಡಿದ್ದಾರೆಯೇ ? ಹಾಗಿದ್ದಲ್ಲಿ ಯಾವ ಯಾವ ಬಡಾವಣೆಯ ರಸ್ತೆ ಬದಿಯಲ್ಲಿ ಈಗಾಗಲೇ ಗಿಡಗಳನ್ನು ನೆಡಲಾಗಿದೆ ?

ಆ) ರಸ್ತೆ ಬದಿ ಗಿಡ ನೆಟ್ಟರೆ ನೀರು ಹಾಕುವ ಪರಿಪಾಠ ಇದೆಯೇ ? ಇದ್ದಲ್ಲಿ ಎಷ್ಟು ದಿವಸಕ್ಕೆ ಒದಗಿಸಲಾಗುತ್ತದೆ ?

ಇ) ರಸ್ತೆ ಬದಿಯ ಗಿಡಗಳನ್ನು ರಕ್ಷಣೆ ಮಾಡುವುದಕ್ಕೆ ಇಲಾಖೆಯ ಸಿಬ್ಬಂದಿ ಇರುವರೆ ? ಇಲ್ಲದಿದ್ದರೆ ಗಿಡಗಳ ರಕ್ಷಣೆ ಕಾರ್ಯವನ್ನು ಯಾರಿಗೆ ವಹಿಸಿಕೊಡಲಾಗಿದೆ ?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನೆ ಮಂತ್ರಿಗಳು).—

ಅ) ಹೌದು, ಪಟ್ಟಿಯನ್ನು ಲಗತ್ತಿಸಿದೆ.

ಆ) ರಸ್ತೆ ಬದಿ ನೆಟ್ಟಿರುವ ಗಿಡಗಳಿಗೆ ಬೇಸಿಗೆ ಕಾಲದಲ್ಲಿ ಸಾಮಾನ್ಯವಾಗಿ ನೀರು ಹಾಕುವ ಪರಿಪಾಠ ಇದೆ. ೨೫ ರಿಂದ ೩೦ ದಿವಸಕ್ಕೆ ಒಮ್ಮೆ ಗಿಡಗಳಿಗೆ ನೀರು ಉಣಿಸಲಾಗುತ್ತಿದೆ.

ಇ) ಹೌದು, ಉದ್ಭವಿಸುವುದಿಲ್ಲ.